ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ Improvements of roads drains Balance main cross roads of Someshwara Nagara.

ಪುಟದ ಸಂಖ್ಯೆ 01

ಕಡತದ ಸಂಖ್ಯೆ AEE/ಯಸಾನ/4.14./19-20

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮಂಡಿಸಿದೆ.

1)

ವಿಷಯ: Improvements of roads and drains balance main and cross roads of Someshwara Nagara in ward no:04.

******

2)

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಯಲಹಂಕ ಉಪನಗರ, ವಾರ್ಡ್ ನಂ-04 ರ ವ್ಯಾಪ್ತಿಯಲ್ಲಿ ಬರುವ ಯಲಹಂಕ ಉಪನಗರದ ಸೋಮೇಶ್ವರ ನಗರವನ್ನು ಈಗಾಗಲೇ ಅಭಿವೃದ್ಧಿಪಡಿಸಲಾಗಿದ್ದು, ಇನ್ನನುಳಿದ ರಸ್ತೆಗಳಾದ ಕಾರ್ಪೊರೇಟರ್ ಮನೆಯ ರಸ್ತೆ, 3ನೇ ಬಿ ಕ್ರಾಸ್ ರಸ್ತೆ ಮತ್ತು 4ನೇ ಕ್ರಾಸ್ ರಸ್ತೆಗಳನ್ನು ಅಭಿವೃದ್ಧಿಪಡಿಸಬೇಕಾಗಿರುತ್ತದೆ. ಸದರಿ ರಸ್ತೆಗಳನ್ನು ಅಭಿವೃದ್ಧಿಪಡಿಸಿಕೊಡುವಂತೆ ಸಾರ್ವಜನಿಕರು ಯಲಹಂಕ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಮತ್ತು ಬಿ.ಬಿ.ಎಂ.ಪಿ ಸದಸ್ಯರುಗಳಿಗೆ ಮನವಿಯನ್ನು ಸಲ್ಲಿಸಿರುತ್ತಾರೆ. ಆದುದರಿಂದ ಯಲಹಂಕ ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರು ಮತ್ತು ಬಿ.ಬಿ.ಎಂ.ಪಿ ಸದಸ್ಯರು ಸದರಿ ಕಾಮಗಾರಿಯನ್ನು 2019-20ನೇ ಸಾಲಿನ **POW Works** ಅನುದಾನದಡಿಯಲ್ಲಿ ಸೇರಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಂತೆ ತಿಳಿಸಿರುತ್ತಾರೆ.

3)

ಅದರಂತೆ, ಸ್ಥಳ ಪರಿವೀಕ್ಷಣೆ ಮಾಡಿ ಈ ಮೇಲ್ಕಂಡ ಕಾಮಗಾರಿಯನ್ನು 2019-20ನೇ ಸಾಲಿನ **POW Works** ಅನುದಾನದಡಿಯಲ್ಲಿ ರೂ.25.00ಲಕ್ಷಗಳಿಗೆ ಹಾಗೂ ಅಂದಾಜು ಪಟ್ಟಿಯನ್ನು PW, P&IWTD S.R.Bangalore Circle for the year 2018-19 ದರಪಟ್ಟಿಯಂತೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಸದರಿ ಅಂದಾಜು ಪಟ್ಟಿಯಲ್ಲಿ ಈ ಕೆಳಕಂಡ ಅಂಶಗಳು ಒಳಗೊಂಡಿರುತ್ತದೆ.

1) ಚರಂಡಿಗಳ ಕಲ್ಲಿನ ಚಪ್ಪಡಿಗಳನ್ನು ತೆಗೆಯುವುದು ಮತ್ತು ಪುನರ್ ಜೋಡಿಸುವುದು.
2) ಸಾಮಾನ್ಯ ಮಣ್ಣಿನ ಅಗೆತ ಮತ್ತು ತೆಗೆದ ಮಣ್ಣನ್ನು ದೂರದ ಸ್ಥಳಕ್ಕೆ ಸಾಗಿಸುವುದು.
3) ಆರ್.ಸಿ.ಸಿ. ಪ್ರೀ ಕ್ಯಾಸ್ಟ್ ಕವರಿಂಗ್ ಸ್ಲಾಬ್ ಮಾಡುವುದು.
4) ಗ್ರಾನ್ಯುಲರ್ ಸಬ್‌ಬೇಸ್ ನ್ನು ಹಾಕುವುದು.
5) ವೆಟ್‌ಮಿಕ್ಸ್‌ನ್ನು ಹಾಕುವುದು.
6) ಪ್ರೈಮರ್ ಕೋಟ್‌ನ್ನು ಹಾಕುವುದು.
7) ಬಿಟುಮಿನಸ್ ಮೆಕಾಡಮ್‌ನ್ನು ಅಳವಡಿಸುವುದು.
8) 40 ಎಂ.ಎಂ.ದಪ್ಪದ ಬಿಟುಮಿನಸ್ ಕಾಂಕ್ರೀಟ್‌ನ್ನು ಹಾಕುವುದು
13) Road marking with Hot applied Thermoplastic compound

ಮೇಲ್ಕಂಡ ಎಲ್ಲಾ ಅಂಶಗಳು ಸದರಿ ಕಾಮಗಾರಿಗೆ ಬಹಳ ಅವಶ್ಯಕವಾಗಿರುವುದರಿಂದ ಈ ಕಾಮಗಾರಿಗೆ 2019-20ನೇ ಸಾಲಿನ POW Works 004-20-000196 ಅನುದಾನದಡಿಯಲ್ಲಿ ಕಾಮಗಾರಿಯ ಸಂಕೇತ ದೊರೆತಿದ್ದು ಕೆಲಸವನ್ನು ತುರ್ತಾಗಿ ತೆಗೆದುಕೊಳ್ಳಬೇಕಾಗಿರುವುದರಿಂದ ಹಾಗೂ ಟೆಂಡರ್ ಪ್ರಕ್ರಿಯೆ ಕೈಗೊಳ್ಳಲು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕೆ ಮಂಡಿಸಿದೆ.

ಸ.ಅ (ವಾರ್ಡ್-ನಂ:04)

ಸ.ಕಾ.ಅ (ಯ.ಉ.ವಿ)

ಕಾರ್ಯಪಾಲಕ ಅಭಿಯಂತರರು [ಯ.ವಿ]

ಕಂಡಿಕೆ(1) ರಿಂದ (4)ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪನಗರ ಉಪ ವಿಭಾಗರವರು ಮಾಡಿರುವ ಪ್ರಸ್ತಾವನೆಯಂತೆ, 2019-20ನೇ ಸಾಲಿನ (POW Works) ವಾರ್ಷಿಕ ಆಯವ್ಯಯದ ಲೆಕ್ಕಶೀರ್ಷಿಕೆ ಕ.ಸಂ.1771ರ ಅನುದಾನದಡಿ ಮಂಜೂರಾಗಿರುವ ರೂ.25.00ಲಕ್ಷಗಳ ಕಾಮಗಾರಿಯನ್ನು ಯಲಹಂಕ ಉಪನಗರ ಉಪ ವಿಭಾಗದ ವಾರ್ಡ್ ನಂ:04ರ ವ್ಯಾಪ್ತಿಯ ಸೋಮೇಶ್ವರ ನಗರದ ಕಾರ್ಪೋರೇಟರ್ ಮನೆಯ ರಸ್ತೆ, 3ನೇ ಬಿ ಕ್ರಾಸ್ ರಸ್ತೆ ಮತ್ತು 4ನೇ ಕ್ರಾಸ್ ರಸ್ತೆಗಳು ಅಭಿವೃದ್ಧಿಪಡಿಸುವ ಕಾಮಗಾರಿಯನ್ನು ಕೈಗೊಳ್ಳಲು 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ಎಸ್.ಆರ್. ದರಪಟ್ಟಿಯನ್ನು ಅನುಸರಿಸಿ ರೂ.25.00ಲಕ್ಷಗಳಿಗೆ ಅಂದಾಜುಪಟ್ಟಿಯನ್ನು ತಯಾರಿಸಲಾಗಿದ್ದು ಸದರಿ ಅಂದಾಜುಪಟ್ಟಿಗೆ ಈಗಾಗಲೇ ಕಾಮಗಾರಿ ಸಂಕೇತ ದೊರೆತ್ತಿದ್ದು, ಮಾನ್ಯ ಆಯುಕ್ತರವರು ಅಧಿಕಾರ ಪ್ರತ್ಯಾಯೋಜಿಸಿ ಹೊರಡಿಸಿರುವ ಆದೇಶ ಸಂಖ್ಯೆ:ಬಿ12(1)ಪಿ.ಆರ್/394/2019-20 ದಿನಾಂಕ:25-9-2019 ರಂತೆ ನೀಡಿರುವ ಅಧಿಕಾರದನ್ವಯ ಆಡಳಿತಾತ್ಮಕ ಅನುಮೋದನೆ, ತಾಂತ್ರಿಕ ಮಂಜೂರಾತಿ ನೀಡಲು ಕೋರಿ ಕಡತವನ್ನು ಸಲ್ಲಿಸಿದೆ.

ಕಾ.ಪಾ.ಅ(ಯ.ವಿ)

ಮುಖ್ಯ ಅಭಿಯಂತರರು (ಯಲಹಂಕ ವಲಯ)

ಸಂಖ್ಯೆ

ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಂಡಿಕೆ 1 ರಿಂದ 05 ರವರೆಗಿನ ವರದಿಯನ್ನು ತಮ್ಮ ಅವಗಾಹನೆಗ ಸಲ್ಲಿಸಿದೆ. Improvements to to roads and drains Balance main and cross roads of Someshwara nagara in ward no-04 ಕಾಮಗಾರಿಯನ್ನು ನಿರ್ವಹಿಸಲು ರೂ25.00 ಲಕ್ಷಗಳಿಗೆ 2019-20ನೇ ಸಾಲಿನ ಪಿ-3726ರ ಅಡಿಯಲ್ಲಿ ಜಾಬ್ ಸಂಕೇತ:004-20-000156 ದೊರೆತಿದ್ದು, ಕಾರ್ಯಪಾಲಕ ಅಭಿಯಂತರರು (ಯಲಹಂಕ) ರವರು ಪ್ರಸ್ತಾಪಿತ ಕಾಮಗಾರಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ಕೋರಿ ಕಡತ ಸಲ್ಲಿಸಿರುತ್ತಾರೆ.

(07) ಸದರಿ ಕಾಮಗಾರಿಯನ್ನು ನಗರೋತ್ಥಾನ ಯೋಜನೆ ಅಡಿಯಲ್ಲಿ ಅಥವಾ ಯಾವುದೇ ಲೆಕ್ಕಶೀರ್ಷಿಕೆ ಅಡಿಯಲ್ಲಿ ಕೈಗೊಂಡಿರದ ಬಗ್ಗೆ ಪರಿಶೀಲಿಸಿಕೊಂಡು Overlap ಆಗದಂತೆ ಹಾಗೂ ದಿನಾಂಕ:13-12-2019ರ ಮಾನ್ಯ ಆಯುಕ್ತರು ರವರ ಆದೇಶದನ್ವಯ ಅಂದಾಜು ಪಟ್ಟಿಯಲ್ಲಿ ಅಗತ್ಯ ಅಂಶಗಳನ್ನು ಅಳವಡಿಸಿಕೊಂಡು ಸೂಕ್ತ ಕ್ರಮವಹಿಸಿ, ಪ್ರಸ್ತಾಪಿತ ಕಾಮಗಾರಿಗಳನ್ನು ನಿಮಯಾನುಸಾರ ಅನುಷ್ಠಾನಗೊಳಿಸಲು ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗ ರವರಿಗೆ ಸೂಚಿಸಲಾಗಿದ್ದು, ಮಾನ್ಯ ಆಯುಕ್ತರು ರವರ ಅಧಿಕಾರ ಪ್ರತ್ಯಾಯೋಜನೆ ಆದೇಶ ಸಂಖ್ಯೆ ಬಿ12(1)ಪಿಆರ್/394/201-20,ದಿನಾಂಕ:25-09-2019ರಂತೆ ಆಡಳಿತಾತ್ಮಕ ಮತ್ತು, ತಾಂತ್ರಿಕ, DTS ಅನುಮೋದನೆ ನೀಡುವ ಸಂಬಂಧ ತಮ್ಮ ಮುಂದಿನ ಆದೇಶಕ್ಕಾಗಿ ಕೋರಿ ಮಂಡಿಸಿದೆ.

(08) ಮು.ಕ (ಯಲ)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಪತ್ ಬೆಂಗಳೂರು ಮಹಾನಗರ ಪಾಲಿಕೆ

ಮಂಡಿಸಿದೆ.

ವಿಷಯ:- Improvements to roads and drains balance main and cross roads of Someshwara nagara in ward no -04. ರ ಕಾಮಗಾರಿಯ ಟೆಂಡರ್ ಮೌಲ್ಯಮಾಪನದ ಬಗ್ಗೆ.

ಉಲ್ಲೇಖ:

1. ಕಾಮಗಾರಿ ಟೆಂಡರ್ ಪ್ರಕಟಣೆ ಸಂಖ್ಯೆ: BBMP/EE/YNK.D/ E-PMT/ 01/2020-21 dated: 02-05-2020.

* * * * *

(09) ಮೇಲ್ಕಂಡ ವಿಷಯಕ್ಕೆ ಸಂಬಂದಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪ್ರದೇಶಗಳಲ್ಲಿ ಮೂಲಭೂತ ಸೌಕಾರ್ಯಗಳ ಅಭಿವೃದ್ದಿಗಾಗಿ 2019-20ನೇ ಸಾಲಿನ ಆಯವ್ಯಯದಲ್ಲಿ ವಾರ್ಡ್ ನಂ-04 ರ ವ್ಯಾಪ್ತಿಯಲ್ಲಿ ಅಭಿವೃದ್ದಿ ಕಾಮಗಾರಿಗಳನ್ನು ಕೈಗೊಂಡು ನಿರ್ವಹಿಸಲು ಈ ಕೆಳಕಂಡ ಕಾಮಗಾರಿಗೆ ಜಾಬ್ ಸಂಖ್ಯೆ 004-20-000156 ರಂತೆ ದೊರೆತಿರುತ್ತದೆ. ವಿವರ ಈ ಕೆಳಕಂಡಂತಿದೆ.

Sl No	Name of work	Estimate cost Rs in Lakhs
01	Improvements to roads and drains balance main and cross roads of Someshwara nagara in ward no -04	25.00
	Total	25.00

(10) ಈ ಮೇಲ್ಕಂಡ ಕಾಮಗಾರಿಗೆ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿಗಳನ್ವಯ ಹಾಗೂ ಪರಿಷ್ಕೃತ ದರಗಳನ್ವಯ ರೂ.25.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಸದರಿ ಅಂದಾಜು ಪಟ್ಟಿಗೆ ಮುಖ್ಯ ಅಭಿಯಂತರರು ಯಲಹಂಕ ವಲಯರವರು ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ಹಾಗೂ ಕರಡು ಟೆಂಡರ್ ಷೆಡ್ಯೂಲ್‌ಗೆ ಅನುಮೋದನೆ ನೀಡಿರುತ್ತಾರೆ.

(11) ಈ ಮೇಲ್ಕಂಡ ಕಾಮಗಾರಿಗೆ ಸಂಬಂದಿಸಿದಂತೆ ಉಲ್ಲೇಖ (1) ರಂತೆ ದಿನಾಂಕ: 31-01-2020 ರಂದು KTPP.Act Standard Tender Document ಅನುಸಾರ E-Procurement ಮುಖಾಂತರ ಟೆಂಡರ್ ಕರೆದಿದ್ದು, ಸದರಿ ಟೆಂಡರ್ ಪ್ರಕಟಣೆಯನ್ನು ಸಾರ್ವಜನಿಕ ಸಂಪರ್ಕಾಧಿಕಾರಿಗಳ ಮುಖಾಂತರ ವಿಜಯ ಕರ್ನಾಟಕ ದಿನ ಪತ್ರಿಕೆಯಲ್ಲಿ ದಿನಾಂಕ: 3-5-2020 ರಂದು ಪ್ರಕಟಿಸಲಾಗಿರುತ್ತದೆ.

ಸದರಿ ಟೆಂಡರ್‌ನ ವಿವರಗಳು ಈ ಕೆಳಕಂಡತಿರುತ್ತದೆ.

ಕ್ರ.ಸಂ	ಅಂಶಗಳು	ವಿವರಗಳು
1	ಕೆಲಸದ ಹೆಸರು	Improvements to roads and drains balance main and cross roads of Someshwara nagara in ward no -04
(12) 2	ಅಂದಾಜು ಮೊತ್ತ	ರೂ.25.00 ಲಕ್ಷಗಳು
3	ಇಂಡೆಂಟ್ ನಂ	BBMP/2020-21 / OW/ Work_ INDENT _41520

ಪಂಕ್ತಿಯ ಸಂಖ್ಯೆ

ಟಿಪ್ಪಣಿಗಳು ಮತ್ತು ಆಜ್ಞೆಗಳು

3	ಅನುದಾನದ ಯೋಜನೆ ಹೆಸರು	2019–20ನೇ ಸಾಲಿನ ಆಯವ್ಯಯ
4	ಲೆಕ್ಕಶಿರ್ಷಿಕೆ	ಪಿ– 1771
5	ಅಡಳಿತಾತ್ಮಕ ಅನುಮೋದನೆ	ಮುಖ್ಯ ಅಭಿಯಂತರರು ಯಲಹಂಕ ವಲಯರವರಿಂದ ಪಡೆಯಲಾಗಿದೆ.
6	ತಾಂತ್ರಿಕ ಮಂಜೂರಾತಿ ಮೊತ್ತ	ರೂ. 25.00 ಲಕ್ಷಗಳು
7	ತಾಂತ್ರಿಕ ಮಂಜೂರಾತಿ ಸಂಖ್ಯೆ	ಸಂಖ್ಯೆ ಬೃ.ಬೆಂ.ಮ.ಪಾ/ಕಾ.ಅ/ತಾ.ಮಂ/ಯ.ವಿ./351/2020–21 ದಿನಾಂಕ 12–04–2020.
8	ಟೆಂಡರ್‌ಗೆ ಇಟ್ಟ ಮೊತ್ತ	ರೂ. 22,31,541.27
9	ಅನ್ ಲೈನ್ ಇ–ಪ್ರಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ.	21-05-2020 upto 16.00 hrs
10	ಅನ್ ಲೈನ್ ಇ–ಪ್ರಕ್ಯೂರ್ ಮೆಂಟ್ ಮುಖಾಂತರ ಟೆಂಡರ್ ತೆರೆಯುವ ದಿನಾಂಕ	22-05-2020 after 16.00 hrs

(13)

ಮೇಲ್ಕಂಡ ಟೆಂಡರ್ ಪ್ರಕಟಣೆಗೆ ಸಂಬಂದಿಸಿದಂತೆ ದಿನಾಂಕ: 22–05–2020 ರಂದು ಟೆಂಡರ್‌ಅನ್ನು ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಮೂರು ಜನ ಗುತ್ತಿಗೆದಾರರು ಬಾಗವಹಿಸಿದ್ದು, ಗುತ್ತಿಗೆದಾರರ ವಿವರಗಳು ಈ ಕೆಳಕಂಡಂತಿರುತ್ತದೆ.

1. Sri Kishore Kumar M
2. Sri Sathish M
3. Sri B B Umesha

(14)

ಮೇಲ್ಕಂಡ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸಿದ್ದು, ಮೂರು ಜನ ಗುತ್ತಿಗೆದಾರರು ಒಟ್ಟು ಇ.ಎಂ.ಡಿ ಮೊತ್ತ ರೂ. 50,000.00 ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಪಾವತಿಸಿರುತ್ತಾರೆ. ಅದರಂತೆ ಮೇಲ್ಕಂಡ ಮೂರು ಜನ ಬಿಡ್ದುದಾರರ ನಮೂದಿಸಿರುವ ದರಗಳ ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ ಸಂ	ಗುತ್ತಿಗೆದಾರರ ಹೆಸರು	ಟೆಂಡರ್ ಗಿಟ್ಟ ಮೊತ್ತ 2018–19ರ ಅನುಮೋದಿತ ದರಗಳಿಗೆ ಹೊಲಿಸಿದಾಗ.	ಟೆಂಡರ್ ಗಿಟ್ಟ ಮೊತ್ತ 3–1–2020ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ.	ಗುತ್ತಿಗೆ ದಾರರು ನಮೂದಿಸಿರುವ ದರಗಳು	2018–19ನೇ ಸಾಲಿನ ಎಸ್.ಆರ್‌ಧರಗಳಿಗೆ ಹೋಲಿಸಿದಾಗ ಶೇಕಡವಾರು	ದಿನಾಂಕ: 3–1–2020ರ ಪರಿಷ್ಕೃತ ದರಗಳಿಗೆ ಹೋಲಿಸಿದಾಗ ಶೇಕಡ	ಷರಾ
01	Sri Kishore Kumar M	22,31,541.27	22,31,541.27	20,96,211.12	(-)6.06%	(-)6.06%	
02	Sri Sathish M			22,86,492.20	(+)2.46%	(+)2.46%	
03	B B Umesha			23,09,327.84	(+)3.48%	(+)3.48%	

(15)

ಮೇಲ್ಕಂಡ ಮೂರು ಗುತ್ತಿಗೆದಾರರು ಸಲ್ಲಿಸಿರುವ ಆರ್ಥಿಕ ಬಿಡ್‌ಅನ್ನು ಪರಿಶೀಲಿಸಲಾಗಿ Sri Kishore Kumar M ರವರು ನಮೂದಿಸಿರುವ ರೂ 20,96,211.12 ಗಳು ಅತಿ ಕಡಿಮೆ ದರಗಳಾಗಿರುತ್ತದೆ.

(16) ಆದುದರಿಂದ ಗುತ್ತಿಗೆದಾರರಾದ Sri Kishore Kumar M ರವರು ನಮೂದಿಸಿರುವ ರೂ. 20,96,211.12 ಗಳು ಅತಿ ಕಡಿಮೆ ದರಗಳಾಗಿದ್ದು, ಅನುಮೋದಿತ ಅಂದಾಜು ಪಟ್ಟಿಯ 2018-19 ಸಾಲಿನ ದರಗಳಿಗೆ ಹಾಗೂ ದಿನಾಂಕ: 03-01-2020 ರಂತೆ ಪರಿಷ್ಕೃತ ದರಪಟ್ಟಿಗೆ ತುಲನೆ ಮಾಡಿದಾಗ ಶೇಕಡ (-)6.06% ರಷ್ಟು ಕಡಿಮೆ ದರಗಳನ್ನು ನಮೂದಿಸಿ ಅರ್ಹ ಗುತ್ತಿಗೆದಾರರಾಗಿರುತ್ತಾರೆ. ಸದರಿ ಟೆಂಡರ್‌ನಲ್ಲಿ ಅರ್ಹ ಗುತ್ತಿಗೆದಾರರಾದ Sri Kishore Kumar M ರವರು ನಮೂದಿಸಿರುವ ದರ ರೂ. 20,96,211.12 ಗಳನ್ನು ಪರಿಷ್ಕೃತ ದರಪಟ್ಟಿಗೆ ಹೋಲಿಸಿದಾಗ ಶೇಕಡ (-)6.06% ರಷ್ಟು ಕಡಿಮೆಯಾಗಿದ್ದು, ಗುತ್ತಿಗೆದಾರರು ಸಲ್ಲಿಸಿರುವ ದರಗಳಿಗೆ ಅನುಮೋದನೆ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕಾಗಿ ಮಂಡಿಸಿದೆ.

03/06/2020

ಕಾರ್ಯಪಾಲಕ ಅಭಿಯಂತರರು
ಯಲಹಂಕ ವಿಭಾಗ
Executive Engineer
Bruhat Bengaluru Mahanagara Palike
Yelahanka, Division

(17) ಮುಖ್ಯ ಅಭಿಯಂತರರು (ಯಲಹಂಕ ವಲಯ)

ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರ ವರದಿಯನ್ನು ತಮ್ಮ ಅವಗಾಹನೆಗೆ ತರಲಾಗಿದ್ದು ದಿನಾಂಕ:22-05-2020ರಂದು ಟೆಂಡರ್ ತೆರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಮೂರು ಜನ ಗುತ್ತಿಗೆದಾರರಾದ1)Sri.Kishor Kumar.M 2)Sri.Sathish.M, 3)Sri.BB Umesh ರವರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದು, Sri.Kishor Kumar.M ರವರು ನಮೂದಿಸಿರುವ ರೂ 20,96,211.12ಗಳು ಅತಿ ಕಡಿಮೆ ದರಗಳಾಗಿದ್ದು, ಅನುಮೋದಿತ ಅಂದಾಜು ಪಟ್ಟಿಯ 2018-19ನೇ ಸಾಲಿನ ದರಗಳಿಗೆ ಹಾಗೂ ದಿನಾಂಕ:03-01-2020ರಂತೆ ಪರಿಷ್ಕೃತ ದರಪಟ್ಟಿಗೆ ತುಲನೆ ಮಾಡಿದಾಗ ಶೇಕಡ(-)6.06%ರಷ್ಟು ಕಡಿಮೆ ದರಗಳನ್ನು ನಮೂದಿಸಿ ಅರ್ಹ ಗುತ್ತಿಗೆದಾರರಾಗಿರುತ್ತಾರೆ. ಗುತ್ತಿಗೆದಾರರು ಸಲ್ಲಿಸಿರುವ ದರಗಳಿಗೆ ಅನುಮೋದನೆ ಕೋರಿರುವುದರಿಂದ ಮುಂದಿನ ಆದೇಶಕ್ಕೆ ಸಲ್ಲಿಸಿದೆ.

(18) ಮು. ಅ (ಯ.ವ)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

19) ಕಂಡಿಕೆ (18)ರಲ್ಲಿ ಮಾನ್ಯ ಮುಖ್ಯ ಅಭಿಯಂತರರ ಅನುಮೋದನೆಯಂತೆ ಎಲ್1 ಗುತ್ತಿಗೆದಾರರಾದ ಶ್ರೀ.ಕಿಶೋರ್‌ಕುಮಾರ್.ಎಂ ರವರಿಗೆ ಎಲ್.ಓ.ಎ ನೀಡಿ ಎಫ್.ಎಸ್.ಡಿ ಮೊತ್ತ **ರೂ.1,04,810/-** ಹಾಗೂ ಇ-ಸ್ಟಾಂಪ್ ಪೇಪರ್ **ರೂ.300/-**ಗಳನ್ನು ಈ ಕಛೇರಿಗೆ ಸಲ್ಲಿಸಲು ತಿಳಿಸಲಾಗಿರುತ್ತದೆ. ಆದರೆ ಈವರೆಗೂ ಸದರಿ ಗುತ್ತಿಗೆದಾರರು ಎಫ್.ಎಸ್.ಡಿ ಮೊತ್ತ ಹಾಗೂ ಕರಾರು ಪತ್ರ ನೀಡಿರುವುದಿಲ್ಲ ಹಾಗೂ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಪ್ರಸ್ತುತ ಕೋವಿಡ್-19 ಪಿಡುಗಿನಿಂದಾಗಿ ಆರ್ಥಿಕ ಮುಗ್ಗಟ್ಟು ಎದುರಾಗಿದ್ದು ಅಗತ್ಯ ಮಾನವ ಸಂಪನ್ಮೂಲವನ್ನು ಕ್ರೂಡೀಕರಿಸಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿ, ಇ.ಎಂ.ಡಿ ಮೊತ್ತವನ್ನು ಹಿಂದಿರುಗಿಸಲು ಕೋರಿರುತ್ತಾರೆ. ಮುಂದುವರೆದು ಎಲ್2 ಗುತ್ತಿಗೆದಾರರಾದ ಶ್ರೀ.ಸತೀಶ್ ಎಂ. ರವರು ಸದರಿ ಕಾಮಗಾರಿಯನ್ನು ಕೈಗೊಳ್ಳುವುದಾಗಿ ತಿಳಿಸಿದ್ದು ಸದರಿ ಗುತ್ತಿಗೆದಾರರೊಂದಿಗೆ ದರ ಸಂದಾನ ನಡೆಸಲಾಗಿ ಎಲ್1 ಗುತ್ತಿಗೆದಾರರು ನಮೂದಿಸಿರುವ **ದರ ರೂ. 20,96,211/-** (ಪರಿಷ್ಕೃತ ದರ ಪಟ್ಟಿಗೆ ಓಲಿಸಿದಾಗ (-)6.06% ರಷ್ಟು ಕಡಿಮೆಯಾಗಿರುತ್ತದೆ) ಗಳಿಗೆ ಕಾಮಗಾರಿ ಕೈಗೊಳ್ಳುವುದಾಗಿ ಒಪ್ಪಿರುತ್ತಾರೆ. ಆದ್ದರಿಂದ ಗುತ್ತಿಗೆದಾರರಾದ ಶ್ರೀ.ಸತೀಶ್.ಎಂ. ರವರಿಗೆ **ರೂ.20,96,211/-** ದರಗಳಿಗೆ ಅನುಮೋದನೆ ಕೋರಿ ಕಡತವನ್ನು ತಮ್ಮ ಮುಂದಿನ ಆದೇಶಕ್ಕೆ ಮಂಡಿಸಿದೆ.

ಕಾರ್ಯಪಾಲಕ ಅಭಿಯಂತರರು,
ಯಲಹಂಕ ವಿಭಾಗ.

20) ಮುಖ್ಯ ಅಭಿಯಂತರರು (ಯ.ವ)

21) ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರ ವರದಿಯಂತೆ ಎಲ್-1 ಗುತ್ತಿಗೆದಾರರಾದ ಶ್ರೀ ಕಿಶೋರ್‌ಕುಮಾರ್.ಎಂ.ರವರಿಗೆ ಎಲ್‌ಓಎ ನೀಡಿ ಎಫ್‌ಎಸ್‌ಡಿ ಮೊತ್ತ ರೂ 1,04,810.00 ಹಾಗೂ ಇ-ಸ್ಟಾಂಪ್ ಪೇಪರ್ ರೂ300.00 ಗಳನ್ನು ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ ಕಛೇರಿಗೆ ಸಲ್ಲಿಸುವಂತೆ ತಿಳಿಸಿರುತ್ತಾರೆ ಆದರೆ ಈವರೆಗಿವ್ವೂ ಸದರಿ ಗುತ್ತಿಗೆದಾರರು ಎಫ್‌ಎಸ್‌ಡಿ ಮೊತ್ತ ಹಾಗೂ ಕರಾರು ಪತ್ರ ನೀಡಿರುವುದಿಲ್ಲ ಹಾಗೂ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಪ್ರಸ್ತುತ ಕೋವಿಡ್-19 ಪಿಡುಗಿನಿಂದಾಗಿ ಆರ್ಥಿಕ ಮುಗ್ಗಟ್ಟು ಎದುರಾಗಿದ್ದು, ಅಗತ್ಯ ಮಾನವ ಸಂಪನ್ಮೂಲವನ್ನು ಕ್ರೂಢೀಕರಿಸಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿ ಇಎಂಡಿ ಮೊತ್ತವನ್ನು ಹಿಂದಿರುಗಿಸಲು ಕೋರಿರುತ್ತಾರೆ ಅದರಂತೆ ಎಲ್-2 ಗುತ್ತಿಗೆದಾರಾದ ಶ್ರೀ ಸತೀಶ್.ಎಂ ರವರು ಸದರಿಕಾಮಗಾರಿಯನ್ನು ಕೈಗೊಳ್ಳುವುದಾಗಿ ತಿಳಿಸಿದ್ದು, ಗುತ್ತಿಗೆದಾರರೊಂದಿಗೆ ದರ ಸಂದಾನ ನಡೆಸಲಾಗಿ ಎಲ್-1 ಗುತ್ತಿಗೆದಾರರು ನಮೂದಿಸಿರುವ ದರ ರೂ 20,96,211.00 (ಪರಿಷ್ಕೃತ ದರ ಪಟ್ಟಿಗೆ ಓಲಿಸಿದಾಗಿ (-)6.06% ರಷ್ಟು ಕಡಿಮೆಯಾಗಿರುತ್ತದೆ) ಗಳಿಗೆ ಕಾಮಗಾರಿ ಕೈಗೊಳ್ಳುವುದಾಗಿ ಒಪ್ಪಿರುತ್ತಾರೆ ಆದ್ದರಿಂದ ಗುತ್ತಿಗೆದಾರರಾದ ಶ್ರೀ ಸತೀಶ್.ಎಂ.ರವರಿಗೆ ರೂ 20,96,211.00 ಗಳಿಗೆ ಅನುಮೋದನೆ ಕೋರಿರುವುದರಿಂದ ಮುಂದಿನ ಆದೇಶಕ್ಕೆ ಸಲ್ಲಿಸಿದೆ.

22) ಮು.ಅ (ಯ.ವ) ಪರಿಶೀಲಿಸಿ ಸಲ್ಲಿಸಿದೆ

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೆಂಗಳೂರು ಮಹಾನಗರ ಪಾಲಿಕೆ

ಪು.ತಿ.ಸೋ

ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಕಾರ್ಯಪಾಲಕ ಅಭಿಯಂತರರು ಯಲಹಂಕ ವಿಭಾಗರವರ ವರದಿಯಂತೆ ಎಲ್-1 ಗುತ್ತಿಗೆದಾರರಾದ ಶ್ರೀ.ಕಿಶೋರ್‌ಕುಮಾರ್.ಎಂ.ರವರಿಗೆ ಎಲ್‌ಓಎ ನೀಡಿ ಎಫ್‌ಎಸ್‌ಡಿ ಮೊತ್ತ ರೂ 1,04,810.00 ಹಾಗೂ ಇ-ಸ್ಟಾಂಪ್ ಪೇಪರ್ ರೂ300.00 ಗಳನ್ನು ಕಾರ್ಯಪಾಲಕ ಅಭಿಯಂತರರು, ಯಲಹಂಕ ವಿಭಾಗ ಕಛೇರಿಗೆ ಸಲ್ಲಿಸುವಂತೆ ತಿಳಿಸಿರುತ್ತಾರೆ ಆದರೆ ಈವರವಿಗೂ ಸದರಿ ಗುತ್ತಿಗೆದಾರರು ಎಫ್‌ಎಸ್‌ಡಿ ಮೊತ್ತ ಹಾಗೂ ಕರಾರು ಪತ್ರ ನೀಡಿರುವುದಿಲ್ಲ ಹಾಗೂ ಸದರಿ ಕಾಮಗಾರಿಯನ್ನು ಕೈಗೊಳ್ಳಲು ಪ್ರಸ್ತುತ ಕೋವಿಡ್-19 ಪಿಡುಗಿನಿಂದಾಗಿ ಆರ್ಥಿಕ ಮುಗ್ಗಟ್ಟು ಎದುರಾಗಿದ್ದು, ಅಗತ್ಯ ಮಾನವ ಸಂಪನ್ಮೂಲವನ್ನು ಕ್ರೂಢೀಕರಿಸಲು ಸಾಧ್ಯವಾಗಿರುವುದಿಲ್ಲ ಎಂದು ತಿಳಿಸಿ ಇಎಂಡಿ ಮೊತ್ತವನ್ನು ಹಿಂದಿರುಗಿಸಲು ಕೋರಿರುತ್ತಾರೆ ಅದರಂತೆ ಎಲ್-2 ಗುತ್ತಿಗೆದಾರಾದ ಶ್ರೀ ಸತೀಶ್.ಎಂ ರವರು ಸದರಿಕಾಮಗಾರಿಯನ್ನು ಕೈಗೊಳ್ಳುವುದಾಗಿ ತಿಳಿಸಿದ್ದು, ಗುತ್ತಿಗೆದಾರರೊಂದಿಗೆ ದರ ಸಂದಾನ ನಡೆಸಲಾಗಿ ಎಲ್-1 ಗುತ್ತಿಗೆದಾರರು ನಮೂದಿಸಿರುವ ದರ ರೂ 20,96,211.00 (ಪರಿಷ್ಕೃತ ದರ ಪಟ್ಟಿಗೆ ಓಲಿಸಿದಾಗಿ (-)6.06% ರಷ್ಟು ಕಡಿಮೆಯಾಗಿರುತ್ತದೆ) ಗಳಿಗೆ ಕಾಮಗಾರಿ ಕೈಗೊಳ್ಳುವುದಾಗಿ ಒಪ್ಪಿರುತ್ತಾರೆ ಆದ್ದರಿಂದ ಗುತ್ತಿಗೆದಾರರಾದ ಶ್ರೀ ಸತೀಶ್.ಎಂ.ರವರಿಗೆ ರೂ 20,96,211.00ಗಳಿಗೆ ಅನುಮೋದನೆ ಕೋರಿದ್ದು, ಎಲ್-1ಗುತ್ತಿಗೆದಾರರ ಮನವಿಯನ್ನು ಪರಿಗಣಿಸಲು ಕೆಟಿಪಿಪಿ ಕಾಯ್ದೆಯಲ್ಲಿ ಅವಕಾಶವಿಲ್ಲದಿರುವುದರಿಂದ ಸದರಿಯವರ ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಎಲ್-2 ಗುತ್ತಿಗೆದಾರರಿಗೆ ಎಲ್-1 ಗುತ್ತಿಗೆದಾರರು ನಮೂದಿಸಿರುವ ದರದಲ್ಲಿ ಕಾಮಗಾರಿಯನ್ನು ನಿರ್ವಹಿಸಿರುವುದರಿಂದ ಯಾವುದೇ ಆರ್ಥಿಕ ನಷ್ಟವಾಗದಿರುವುದರಿಂದ ಎಲ್-2 ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲು ಅನುಮೋದಿಸಲು ಐ ಮುಂದಿನ ಆದೇಶಕ್ಕೆ ಸಲ್ಲಿಸಿದೆ.

ಮು.ಅ (ಯವ)

ಮುಖ್ಯ ಅಭಿಯಂತರರು
ಯಲಹಂಕ ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

EE (YNC)